ಸಂಘದವರು ಲಾರಿ ಮೇಲೆ ನೂರು ನಾಟಕಗಳನ್ನು ಪ್ರದರ್ಶನ ಮಾಡಲು ಹೊರಟಿದ್ದರು. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಾಗದವೊಂದನ್ನು ಬರೆದು ನಮಗೊಂದು ಜನರೇಟರ್ ಒದಗಿಸಿಕೊಡಿ ಎಂದು ಕೇಳಿದ್ದರು. ನಿರ್ದೇಶಕರೂ ಕೂಡ ಆ ಬಗ್ಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದರು. ಮಾನ್ಯ ಮಂತ್ರಿಗಳು ಅದನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣಗಳೇನು? ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಗಡಿನಾಡು ಅಧ್ಯಯನ ಆಯೋಗದಿಂದ ತೆಗೆದಿದ್ದು ಏಕೆ? ಕನ್ನಡದ ಪರವಾಗಿ ಕಾಳಜಿ ಇರುವಂತಹ ಮಾನ್ಯ ಮಂತ್ರಿಗಳು ಈ ಬಗ್ಗೆ ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ವಿಷಯದ ಬಗ್ಗೆ ನಾನು ವರದಿಯೊಂದನ್ನು ತರಿಸಿಕೊಂಡು ಆ ಬಗ್ಗೆ ಪರಿಶೀಲಿಸಿ ನಾಟಕ ಸಂಘದವರಿಗೆ ಜನರೇಟರ್ ಅನ್ನು ಒದಗಿಸಿಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಏಕ ಸದಸ್ಯ ಆಯೋಗ ಈಗಾಗಲೇ ನೀಡಿರತಕ್ಕ ಮಧ್ಯಂತರ ವರದಿಯನ್ನು ನಾವು ಅನುಷ್ಠಾನಕ್ಕೆ ತರತಕ್ಕಂಥ ಯೋಜನೆ ಮಾಡಿ ನಂತರ ಅದನ್ನು ಮುಂದುವರೆಸುವ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ರಾಜ್ಯದ ಗಡಿ ಅಭಿವೃದ್ಧಿ ಯೋಜನೆ.

71(738)

ಶ್ರೀ ನಾರಾಯಣ ಸ್ವಾಮಿ.ಎ.(ಆನೇಕಲ್): ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಡಿ ಅಭಿವೃದ್ಧಿ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಗಡಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುವ ತಾಲ್ಲೂಕು, ಹೋಬಳಿ ಕೇಂದ್ರಗಳ ವಿವರ ಒದಗಿಸುವುದು.

ಇ) ಸದರಿ ಯೋಜನೆಯಲ್ಲಿ ಈ ಹೋಬಳಿ, ತಾಲ್ಲೂಕು ಕೇಂದ್ರಗಳಿಗೆ 98-99, 99-2000 ಹಾಗೂ 2000-2001 ಸಾಲಿಗೆ ಬಿಡುಗಡೆಯಾದ ಹಣದ ವಿವರ ಒದಗಿಸುವುದು.

ಈ) ಈ ಯೋಜನೆಗಳಲ್ಲಿ ಯೋಜಿತ ಯೋಜನೆಯಂತೆ ಬಿಡುಗಡೆಯಾದ ಮೊತ್ತವನ್ನು ಕಡತಗೊಳಿಸಲು ಕಾರಣವೇನು?

ಶ್ರೀಮತಿ ಸುಮಾ ವಸಂತ್ (ಯೋಜನಾ ರಾಜ್ಯ ಸಚಿವರು):

ಅ) ಇಲ್ಲ.

ಆ ಮತ್ತು ಇ) ಈ ಯೋಜನೆಯಲ್ಲಿ ತಾಲ್ಲೂಕು ಒಂದು ಘಟಕ ಹಾಗೂ ತಾಲ್ಲೂಕುವಾರು ಹಣ ಬಿಡುಗಡೆ ಮಾಡಲಾಗುವುದು. ಈ ಯೋಜನೆಯಡಿಯಲ್ಲಿ ಬರುವ ತಾಲ್ಲೂಕುಗಳು ಹಾಗೂ ಬಿಡುಗಡೆಯಾದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ) ಈ ಸಾಲಿನಲ್ಲಿ ಈ ಯೋಜನೆಗೆ 650 ಲಕ್ಷ ರೂ.ಗಳನ್ನು ಒದಗಿಸಿದ್ದು, ಈವರೆಗೆ 324.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಸಂಪನ್ಮೂಲಗಳನ್ನಾಧರಿಸಿ ಬಿಡುಗಡೆ ಮಾಡಲಾಗುವುದು.

ANNEXURE

BORDER AREA DEVELOPMENT PROGRAMME AMOUNT RELEASED BY GOVERNMENT.

(Rs.in lakhs)

Sl. No.	District/Taluk	1998-99	1999-2000	2000-2001
1	2	3	4	
1.	ANEKAL	8.580	6.910	5.62
2.	HOSAKOTE	8.680	6.910	5.62
3.	KANAKAPURA	8.680	6.910	5.62
4.	CHALLAKERE	16.680	6.910	9.62
5.	HIRIYUR	8.680	6.910	5.62
6.	MOLAKALURU	8.680	6.910	5.62
7.	BAGEPALLI	8.680	6.910	5.62
8.	BANGARPET	8.680	6.910	5.62
9.	CHINTAMANI	8.680	6.910	5.62
10.	GAURIBIDANUR	8.680	6.910	5.62
11.	MALUR	8.680	6.910	5.62
12	MULBAGAL	8.680	6.910	5.62
13.	GUDIBANDA	8.680	6.910	5.62
14.	SRINIVASAPURA	16.680	6.910	5.62

15.	MADHUGIRI	13.680	6.910	5.62
16.	PAVAGADA	13.680	7.270	5.62
17.	SIRA	8.680	6.910	5.62
18.	BANTWAL	8.680	6.910	5.62
19.	MANGALORE	8.680	6.910	5.62
20.	PUTTUR	8.680	6.910	5.62
21.	SULLIA	8.680	11.910	5.62
22.	MADAKERI	8.680	6.910	5.62
23.	VIRAJPET	8.680	6.910	18.12
24.	CHAMARAJA NAGAR	15.680	6.910	5.62
25.	GUNDLUPET	8.680	6.910	5.62
26.	H.D.KOTE	8.680	6.910	5.62
27.	KOLLEGAL	16.680	6.910	10.62
28.	BIJAPURA	13.680	6.910	5.62
29.	INDI	8.680	6.910	5.62
30.	BELLARY	8.680	6.910	5.62
31.	SAIDUR	8.680	6.910	5.62
32.	SIRUGUPPA	8.680	6.910	5.62
33.	AFZALPUR	8.680	6.910	5.62
34.	ALAND	8.680	6.910	5.62

35.	CHINCHOLI	8.680	12.270	5.88
36.	SEDUM	15.680	6.910	5.62
37.	SHAHAPUR	8.680	6.910	5.62
38.	YADGIR	8.680	6.910	8.62
39.	MANVI	17.680	6.910	9.62
40.	RAICHUR	8.680	6.910	5.62
41.	ATHANI	8.680	6.910	5.62
42.	BELGAUM	15.680	6.910	5.62
43.	HUKKERI	8.680	6.910	5.62
44.	CHIKKODI	8.680	6.910	5.62
45.	KHANAPUR	8.680	6.910	5.62
46.	KARWAR	8.680	6.910	5.62
47.	SUPA	8.680	6.910	5.62
48.	AURAD	8.680	6.910	5.62
49.	BASAVAKALYAN	8.680	6.910	5.62
50.	BHALKI	8.680	6.910	5.62
51.	BIDAR	8.680	6.910	5.62
52.	HUMNABAD	8.680	6.910	7.62
	TOTAL	520.000	400.000	324.50

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಗಡಿ ಅಭಿವೃದ್ಧಿ ಕೆಲಸ ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ? ಎಂದು ಕೇಳಿದ ನನ್ನ ಪ್ರಶ್ನೆಗೆ ಇಲ್ಲವೆಂದು ಹೇಳಿದ್ದಾರೆ. ಆದರೆ ಈ ಯೋಜನೆಯಲ್ಲಿ ಯೋಚಿತ ಯೋಜನೆಗೆ ಬಿಡುಗಡೆ ಆದ ಮೊತ್ತವನ್ನು ಕಡಿತಗೊಳಿಸಲು ಕಾರಣವೇನೆಂದು ಕೇಳಿದ್ದೇನೆ, ಅದಕ್ಕೆ ಉತ್ತರ ಈ ಸಾಲಿನಲ್ಲಿ ಯೋಜನೆಗೆ 650 ಲಕ್ಷ ರೂಪಾಯಿಗಳನ್ನು ಒದಗಿಸಿದ್ದು ಈವರೆಗೆ 324.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಉಳಿದ ಹಣವನ್ನು ಸಂಪನ್ಮೂಲಗಳನ್ನು ಆಧರಿಸಿ ಬಿಡುಗಡೆ ಮಾಡಲಾಗುವುದು ಎಂದು ಹೇಳಿದ್ದಾರೆ. ಮಾರ್ಚ್ 31ಕ್ಕೆ ಇನ್ನು 10 ದಿನಗಳು ಬಾಕಿ ಇವೆ. ಆದಕ್ಕೆ ನಿಗದಿ ಮಾಡಿರುವ 650 ಲಕ್ಷ ರೂಪಾಯಿಗಳಲ್ಲಿ 50 ಪರ್ಸೆಂಟ್ ಕೂಡ ಬಿಡುಗಡೆ ಆಗಿಲ್ಲ. ಉಳಿಕೆ ಹಣವನ್ನು ಎಂದು ಬಿಡುಗಡೆ ಮಾಡುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಬೇಕು. ಬಿಡುಗಡೆ ಮಾಡುವಾಗ ಕೆಲವು ತಾಲ್ಲೂಕುಗಳಿಗೆ ಐದು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಕೆಲವು ತಾಲ್ಲೂಕುಗಳಿಗೆ 15 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಈ ತಾರತಮ್ಯಕ್ಕೆ ಕಾರಣವೇನು?

ಶ್ರೀಮತಿ ಸುಮಾ ವಸಂತ್: ಸನ್ಮಾನ್ಯ ಅಧ್ಯಕ್ಷರೆ, 2000-01ನೇ ಸಾಲಿನ ಅನುದಾನವನ್ನು 324 ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದೇವೆ. ಇನ್ನು ಉಳಿದದ್ದನ್ನು ಸದ್ಯದಲ್ಲೇ ಬಿಡುಗಡೆ ಮಾಡುತ್ತೇವೆ. ಯಾವುದೇ ತಾಲ್ಲೂಕಿಗೆ ಹಣವನ್ನು ಬಿಡುಗಡೆ ಮಾಡುವಲ್ಲಿ ತಾರತಮ್ಯ ಮಾಡಿಲ್ಲ.

ಅಧ್ಯಕ್ಷರು: ನೀವು 15 ಕೋಟಿ ಎಂದು ಮೆನ್‌ಷನ್ ಮಾಡುತ್ತೀರಿ, ಆರು ಕೋಟಿ ರೂಪಾಯಿ ಕೂಡ ಅಲ್ಲಿಗೆ ಬಿಡುಗಡೆಯಾಗಿರುವುದಿಲ್ಲ. ಅದನ್ನು ಕೊಡದೆ ಇದ್ದರೆ ಉತ್ತಮ. ಬಾರ್ಡರ್ ಏರಿಯಾ ಡೆವಲಪ್‌ಮೆಂಟ್‌ನವರು ತಾವು ಅನುದಾನ ಬಿಡುಗಡೆ ಮಾಡುತ್ತೀರೆಂದು ಕಾಯುತ್ತಿರುತ್ತಾರೆ. ಎಷ್ಟು ಹಣ ಅನೌನ್ಸ್ ಮಾಡುತ್ತೀರಿ ಅಷ್ಟು ಹಣವಾದರೂ ಕೊಡಿ.

ಶ್ರೀಮತಿ ಸುಮಾ ವಸಂತ್:ಈಗ ಸದ್ಯದಲ್ಲೇ ಬಾಕಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ಅಧ್ಯಕ್ಷರು: ಸದ್ಯದಲ್ಲೇ ಬಾಕಿ ಹಣ ಬಿಡುಗಡೆ ಮಾಡುತ್ತೀರಿ, ನನಗೆ ಡಿಟೇಲ್ ಗೊತ್ತಿದೆ. ಎಷ್ಟು ಅನೌನ್ಸ್ ಮಾಡುತ್ತೀರಿ ಅಷ್ಟಾದರೂ ಬಿಡುಗಡೆ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಇದರ ಬಗ್ಗೆ ಅಧ್ಯಯನ ಮಾಡಿದ್ದೀರಿ. ಏಕೆಂದರೆ ನಿಮ್ಮ ತಾಲ್ಲೂಕು ಸಹ ಗಡಿ ಪ್ರದೇಶದಲ್ಲಿ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ನಮ್ಮ

ಗಡಿ ಭಾಗದಲ್ಲಿ ಇರತಕ್ಕಂಥ ಗ್ರಾಮಗಳ ಪರಿಸ್ಥಿತಿ ನೋಡಿದರೆ ಬಹಳ ಶೋಚನೀಯ ಪರಿಸ್ಥಿತಿ ಇದೆ. ನಾನು ಕಳೆದ ತಿಂಗಳು ಅಥಣಿ ತಾಲ್ಲೂಕಿನ 22 ಗ್ರಾಮಗಳಿಗೆ ಭೇಟಿ ನೀಡಿದ್ದೆ. ಇದು ಪತ್ರಿಕೆಯಲ್ಲೂ ಬಂದಿದೆ. ಈ ರೀತಿಯ ಪರಿಸ್ಥಿತಿ ಎಲ್ಲ ಕಡೆ ಇದೆ. ಆಂಧ್ರ ಬಾರ್ಡರ್ ಇರಬಹುದು, ಮಹಾರಾಷ್ಟ್ರ ಬಾರ್ಡರ್ ಇರಬಹುದು, ತಮಿಳುನಾಡು, ಕೇರಳ, ಗೋವಾ ಇರಬಹುದು, ರಸ್ತೆಗಳು ಹೇಗಿವೆ ಎಂದರೆ ಕರ್ನಾಟಕ ಬಾರ್ಡರ್ ಬಿಟ್ಟು ಆ ರಾಜ್ಯಗಳ ರಸ್ತೆ ಪ್ರವೇಶ ಮಾಡಿದರೆ ಆ ಅನುಭವ ಬೇರೆ. ಅಥಣಿ ತಾಲ್ಲೂಕಿನ 22 ಗ್ರಾಮಗಳು ಒಂದು ನಿರ್ಣಯ ತೆಗೆದುಕೊಂಡಿವೆ. ಇಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇರಬಹುದು, ರಸ್ತೆ ಸಂಪರ್ಕ ಇರಬಹುದು ಶಿಕ್ಷಣದ ವ್ಯವಸ್ಥೆ ಇರಬಹುದು, ಇವುಗಳನ್ನು ಸರ್ಕಾರದವರು ಸರಿಯಾಗಿ ಮಾಡದಿದ್ದರೆ ನಮ್ಮನ್ನು ಮಹಾರಾಷ್ಟ್ರಕ್ಕೆ ಸೇರಿಸಿಬಿಡಿ ಎಂದು ದುಃಖದಿಂದ ಅವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ನಾವು ಒಂದು ಕಡೆ ಮಹಾಜನ್ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಬೇಕೆಂದು ಹೇಳುತ್ತೇವೆ, ಈ ಎಲ್ಲ ಗ್ರಾಮಗಳು ನಮ್ಮ ಗಡಿಯಲ್ಲಿ ಉಳಿಯಬೇಕೆಂದು ಹೇಳುತ್ತೇವೆ, ರಾಜ್ಯ ಸರ್ಕಾರ ಈ ಗಡಿ ಪ್ರದೇಶದಲ್ಲಿರತಕ್ಕಂತಹ ಗ್ರಾಮಗಳ ಬಗ್ಗೆ ತಕ್ಷಣ ಒಂದು ಸ್ಪೆಶಲ್ ಪ್ಯಾಕೇಜ್ ಹಣವನ್ನು ಬಿಡುಗಡೆ ಮಾಡಿದರೆ ಆ ಬಾರ್ಡರ್‌ನಲ್ಲಿ ಇರುವ ಗ್ರಾಮಗಳು ನಮ್ಮ ರಾಜ್ಯದಲ್ಲಿ ಉಳಿಯುತ್ತವೆ. ಇಲ್ಲದಿದ್ದರೆ ಪ್ರತ್ಯೇಕವಾಗಿ ಬೇರೆ ರಾಜ್ಯಗಳಿಗೆ ಹೋಗುವ ವಾತಾವರಣ ನಿರ್ಮಾಣವಾಗುತ್ತದೆ. ಮಾನ್ಯ ಸಚಿವರಾದ ಮಾನ್ಯ ಧರ್ಮ್‌ಸಿಂಗ್‌ರವರು ಇಲ್ಲಿದ್ದಾರೆ, ಫೋರ್ಪಡೆಯವರು ಅಥಣಿ ತಾಲ್ಲೂಕಿನ 22 ಹಳ್ಳಿಗಳಿಗೆ ಹೋಗಿ ಕೆಲವು ಯೋಜನೆಗಳು ಅನೌನ್ಸ್ ಮಾಡಿ ಬಂದರು. ಅವು ಇನ್ನು ಅನುಷ್ಠಾನಕ್ಕೆ ಬಂದಿಲ್ಲ. ಮಾನ್ಯ ಧರ್ಮ್‌ಸಿಂಗ್‌ರವರು ಒಂದು ಕಡೆ ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಆಂಧ್ರಪ್ರದೇಶ ಮತ್ತು ನಮ್ಮ ರಾಜ್ಯದ ನಡುವೆ ಏನು ರಸ್ತೆಗಳಿವೆ, ಇವುಗಳ ಅಭಿವೃದ್ಧಿಗೆ ಅವರ ಜೊತೆ ಸಮಾಲೋಚನೆ ಮಾಡುತ್ತೇವೆಂದು ಹೇಳಿದ್ದರು. ಅದರ ಬಗ್ಗೆ ಏನಾದರೂ ಯೋಜನೆಯನ್ನು ತಾವು ಹಾಕಿಕೊಂಡಿದ್ದೀರಾ ಹೇಗೆ? ಅಥಣಿ ಭಾಗದ ಗ್ರಾಮಗಳ ಸಲುವಾಗಿ ಏನಾದರೂ ಯೋಜನೆ ಹಾಕಿಕೊಂಡಿದ್ದೀರಾ ಹೇಗೆ? ಇದರ ಬಗ್ಗೆ ತಾವು ಬೆಳಕು ಚೆಲ್ಲಬೇಕೆಂದು ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮ್‌ಸಿಂಗ್: ಕರ್ನಾಟಕ ಸರ್ಕಾರ, ಆಂಧ್ರ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಕೂಡ ನಾವು ವಿಚಾರ ಮಾಡುತ್ತಿದ್ದೇವೆ. ನಮ್ಮ ಇಂಜಿನಿಯರ್‌ಗಳು ಅವರ ಇಂಜಿನಿಯರ್‌ಗಳು ಸೇರಿ ಗಡಿ ಭಾಗದಲ್ಲಿರುವ ರೋಡ್ ಬಗ್ಗೆ ಐಡೆಂಟಿಫೈ ಮಾಡುತ್ತಿದ್ದಾರೆ. ನಾವು ಜಾಯಿಂಟ್ ರೆಪ್ರಸಂಟೇಷನ್‌ನ್ನು ಎಮ್‌ಓಎಸ್‌ಟಿ ಮಂತ್ರಿಗಳಿಗೆ ಕೊಡಬೇಕಾಗಿದೆ. ಈಗ ಕೊನೆ ಹಂತದಲ್ಲಿದ್ದೇವೆ. ಇವತ್ತು ಕೇರಳ ಮತ್ತು ಕರ್ನಾಟಕ ಭಾಗದಲ್ಲಿ ಬರತಕ್ಕಂತಹ ಗಡಿ ಪ್ರದೇಶಗಳಲ್ಲಿ

ರಸ್ತೆಗಳು ಏನಿವೆ, ಮತ್ತು ಮಹಾರಾಷ್ಟ್ರ ಮತ್ತು ಬೆಳಗಾಂ ಪ್ರದೇಶಗಳಲ್ಲಿ ಬರತಕ್ಕಂತಹ ರಸ್ತೆಗಳು, ಬೀದರ್, ಕೋಲಾರ, ಆಂಧ್ರ ಮತ್ತು ಕರ್ನಾಟಕದ ರಸ್ತೆಗಳು ಏನಿವೆ, ತಮಿಳುನಾಡು ಕರ್ನಾಟಕ ಗಡಿ ಪ್ರದೇಶಗಳಲ್ಲಿ ಏನಾಗಿದೆ ಎಂದರೆ, ಪೆಟ್ರೋಲ್ ಮತ್ತು ಡೀಸಲ್‌ನಲ್ಲಿ ಎಮ್‌ಓಎಸ್‌ಟಿಯವರು ಸೆಸ್ ಏನು ಕಲೆಕ್ಟ್ ಮಾಡುತ್ತಿದ್ದಾರೆ. ಅವರು ಗಡಿ ಪ್ರದೇಶಗಳಲ್ಲಿ ಇರತಕ್ಕಂತಹ ರಸ್ತೆಗಳ ದುರಸ್ತಿಗೆ ಕೂಡ 15 ಪರ್ಸೆಂಟ್ ಹಣ ಕೊಡುತ್ತಿದ್ದಾರೆ. ಆಂಧ್ರ ಪ್ರದೇಶದ ಲೋಕೋಪಯೋಗಿ ಇಲಾಖೆ ಸಚಿವರ ಜೊತೆ ನಾನು ಮಾತನಾಡಿದ್ದೇನೆ. ಅವರೂ ನಾವೂ ಸೇರಿ ಮಾಡುತ್ತಿದ್ದೇವೆ. ನಮ್ಮ ಚೀಫ್ ಇಂಜಿನಿಯರ್ ಅವರ ಚೀಫ್ ಇಂಜಿನಿಯರ್ ಜಾಯಿಂಟ್ ರೆಪ್ರಸಂಟೇಷನ್ ಕೊಡಬೇಕಾಗಿದೆ. ನಾವು ಈ ರಸ್ತೆಗಳು ಗುರುತಿಸಿ ಅದರ ಬಗ್ಗೆ ಕ್ರಮ ತೆಗೆದುಕೊಂಡು ಮಾಡುತ್ತಿದ್ದೇವೆ.

ಶ್ರೀ. ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಹಿಂದಿನ ಸರ್ಕಾರಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಸಹ ಗಡಿ ಪ್ರದೇಶಗಳಲ್ಲಿ ಇರತಕ್ಕಂತಹ ರಸ್ತೆಗಳಿಗೆ 25 ಲಕ್ಷ ರೂಪಾಯಿ ಪ್ರತಿ ಕ್ಷೇತ್ರಕ್ಕೆ ಕೊಡುತ್ತಿದ್ದರು. ಈಗ ಒಂದೂವರೆ ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಅದನ್ನು ಮತ್ತೆ 25 ಲಕ್ಷ ರೂಪಾಯಿಗೆ ತೆಗೆದುಕೊಂಡು ಹೋಗುವುದಕ್ಕಾಗುತ್ತದೆಯೇ? ಅಥವಾ ಇದು ನಿಮ್ಮ ಸರ್ಕಾರದ ನೀತಿಯೋ ಎಂದು ತಿಳಿಸಬೇಕು. ಕಡಿಮೆಯಾಗುತ್ತಾ ಒಂದೂವರೆ ಲಕ್ಷ ರೂಪಾಯಿಗೆ ಬಂದಿದೆ. ಅದನ್ನು ನಿಲ್ಲಿಸುತ್ತೀರಿ, ಇಲ್ಲ ಮತ್ತೆ 25 ಲಕ್ಷ ರೂಪಾಯಿ ಮಾಡುತ್ತೀರಿ? ಇದು ನಿಮ್ಮ ಸರ್ಕಾರದ ನೀತಿಯಾ?

ಶ್ರೀ ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶದಲ್ಲಿರುವಂತಹ ರಸ್ತೆಗಳಿಗೆ ವಿಶೇಷವಾಗಿ ಹಣವನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ನಬಾರ್ಡ್‌ನಲ್ಲಿ ಕೂಡ ಆ ಪ್ರದೇಶದಲ್ಲಿರತಕ್ಕಂತಹ ಪ್ರತಿಯೊಂದು ಕ್ಷೇತ್ರಕ್ಕೆ ಐದು ಕೋಟಿ ರೂಪಾಯಿ ಕೆಲಸ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಸೆಂಟ್ರಲ್ ರೋಡ್ ಫಂಡ್‌ನಲ್ಲಿ ಕೂಡ ಗಡಿ ಪ್ರದೇಶಗಳಲ್ಲಿ ಹೆಚ್ಚಿನ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ವಿಶೇಷತೆ ಇದೆ. ನನ್ನ ಕ್ಷೇತ್ರ ಬಯಲು ಪ್ರದೇಶಾಭಿವೃದ್ಧಿಗೂ ಸೇರಿರುವುದಿಲ್ಲ, ಬಯಲು ಸೀಮೆ ಅಭಿವೃದ್ಧಿಗೂ ಸೇರುವುದಿಲ್ಲ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಗೂ ಸೇರುವುದಿಲ್ಲ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಪ್ರತಿ ತಾಲ್ಲೂಕಿಗೆ ಗಡಿ ಅಭಿವೃದ್ಧಿ ಯೋಜನೆಗಾಗಿ 25 ಲಕ್ಷ ರೂಪಾಯಿ ಕೊಡುತ್ತಿದ್ದರು. ಅದು ಕಡತ ಮಾಡಿದ್ದಾರೆ. ಗಡಿ ಪ್ರದೇಶಗಳಲ್ಲಿರತಕ್ಕಂತಹ ಗ್ರಾಮಗಳಿಗೆ ರಸ್ತೆ ಸೌಲಭ್ಯ ಯಾರು ಒದಗಿಸಿ ಕೊಡಬೇಕು? ಗ್ರಾಮೀಣ ಪ್ರದೇಶದಲ್ಲಿರುವ ಗ್ರಾಮಗಳಿಗೆ ರಸ್ತೆ ಸೌಲಭ್ಯ ಯಾರು ಒದಗಿಸಿ ಕೊಡುತ್ತಾರೆ? ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿ ಹಣ ಬರುತ್ತಿದೆ,

ಗ್ರಾಮಗಳಿಗೆ ರಸ್ತೆ ಸೌಲಭ್ಯ ಒದಗಿಸಿಕೊಡಬೇಕು. ತಾರತಮ್ಯ ಮಾಡುವುದು ಬೇಡ. ಇಲ್ಲಿ ಇರತಕ್ಕಂತಹ ಗ್ರಾಮಗಳಿಗೆ ಹೆಚ್ಚು ಹಣ ಒದಗಿಸಬೇಕಾಗಿದೆ. ಬಹಳಷ್ಟು ಗ್ರಾಮಗಳು ಹತಾಶವಾಗಿವೆ. ಹೆಚ್ಚು ಹೆಚ್ಚು ಒತ್ತು ಕೊಟ್ಟು ಆ ಯೋಜನೆಗಳು ಮತ್ತೆ ಪುನರಾರಂಭ ಮಾಡಬೇಕು. ಮೊದಲಿನಂತೆ 25 ಲಕ್ಷ ರೂಪಾಯಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ್: ಮಾನ್ಯ ಅಧ್ಯಕ್ಷರೆ, ಆಯಾ ಇಲಾಖೆಯ ವತಿಯಿಂದ ಅಭಿವೃದ್ಧಿಗಾಗಿ ಹಣ ಒದಗಿಸಲಾಗುತ್ತದೆ. ಜಿಲ್ಲಾಪರಿಷತ್ತಿನಿಂದ ಜಿಲ್ಲಾ ಪಂಚಾಯಿತಿ ರಸ್ತೆಗೆ ಹಣ ಬಿಡುಗಡೆ ಮಾಡಲಾಗುತ್ತದೆ, ಲೋಕೋಪಯೋಗಿ ಇಲಾಖೆ ವತಿಯಿಂದ ಲೋಕೋಪಯೋಗಿ ರಸ್ತೆಗೆ ಕೊಡುತ್ತಿದ್ದೇವೆ. ಗಡಿ ಪ್ರದೇಶ ಅಭಿವೃದ್ಧಿಗೆ ಏನು ಹಣ ನಿಗಧಿ ಮಾಡಲಾಗಿದೆ ಅಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದಾಗ ಪ್ರಸ್ತಾಪ ಮಾಡಿದರೆ ಸೂಕ್ತವಾದ ಉತ್ತರ ದೊರೆಯುತ್ತದೆ.

(ಪ್ರಶ್ನೆಯನ್ನು ತಡೆ ಹಿಡಿಯಲಾಯಿತು)

ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಗುರುತಿಸುವುದು.

72(538)

ಶ್ರೀ ಎ.ಎನ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಯುವಜನ ಸೇವೆಗಳು ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿನ ವಿದ್ಯಾರ್ಥಿಗಳಲ್ಲಿ ಗ್ರಾಮೀಣ ಕ್ರೀಡೆ ಪ್ರೋತ್ಸಾಹಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು?

ಆ) ಈ ಕುರಿತಾಗಿ ಯೋಜನೆ ಹಾಕಿಕೊಳ್ಳಲಾಗಿದೆಯೇ? ಎಷ್ಟು ಹಣ ಬಿಡುಗಡೆಯಾಗಿದೆ? ಆಗಿರುವ ವೆಚ್ಚ?

ಇ) ಮೈಸೂರು ತಾಲ್ಲೂಕಿನಲ್ಲಿ ಎಷ್ಟು ಕ್ರೀಡಾಳುಗಳನ್ನು ಗ್ರಾಮೀಣ ಪ್ರದೇಶದಿಂದ ಗುರುತಿಸಲಾಗಿದೆ. ಇವರಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿರುವವರು ಯಾರು?